Rural Higher Education Scheme

Q.—658. Sri S. KARIAPPA (Kanakapura).—

Will the Government be pleased to state:—

(*a*) whether they have tried to avail themselves of the benefit under the Scheme of Rural Higher Education sponsored by the Government of India;

(*b*) if so, the details?

A.—Sri A. G. RAMACHANDRA RAO (Minister for Law and Education).—

(*a*) and (*b*) The matter is under the active consideration of Government.

ಶ್ರೀ ಎಸ್. ಕರಿಯಪ್ಪ.—ಈ ಗ್ರಾಮಾಂತರ ಪ್ರದೇಶದ ಪ್ರೌಢಶಿಕ್ಷಣದ ಯೋಜನೆಯ ಬಗ್ಗೆ ಒಂದು ಪ್ರಪೋಸಲನ್ನು ಕಳುಹಿಸಿಕೊಡಬೇಕೆಂದು ತಮಗೇನಾದರೂ ಕೇಂದ್ರದಿಂದ ಪತ್ರ ಬಂದಿದೆಯೇ?

*ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ.

ಶ್ರೀ ಎಸ್. ಕರಿಯಪ್ಪ.—ಆ ಪತ್ರ ತಮಗೆ ಬಂದು ಎಷ್ಟು ದಿವಸಗಳಾದುವು?

Sri H. SIDDAVEERAPPA.—I am sorry I cannot give the date.

ಆ ರೀತಿಯಾಗಿ ಒಂದು ಪತ್ರ ಬಂದಿತ್ತು. ಆ ಬಗ್ಗೆ ಸರ್ಕಾರ ಕೆಲವು ಪ್ರಪೋಸಲ್ಸ್‌ಗಳನ್ನು ಕಳುಹಿಸಿರಬೇಕೆಂದು ನನಗೆ ಜ್ಞಾಪಕವಿದೆ.

ಶ್ರೀ ಎಸ್. ಕರಿಯಪ್ಪ.—ಏನೆಂದು ತಾವು ಪ್ರಪೋಸ್ ಮಾಡಿದ್ದಿರಿ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲಾ ರೂರಲ್ ಪಾಟ್ಯರ್ನಲ್ಲೂ ಈ ಹೈಸ್ಕೂಲುಗಳನ್ನು ಸ್ಥಾಪಿಸಬೇಕೆಂದು Diploma in Teaching and about 5 or 6 schemes on other subjects ಇವುಗಳನ್ನೆಲ್ಲಾ ತೆರೆಯಬೇಕೆಂದು, ಇನ್ನೂ ಬಹು ಮುಖ್ಯವಾದಂಥ ಹಣಕಾಸಿನ ವೆಚ್ಚದ ಬಗ್ಗೆ ರೆಕರಿಂಗ್ ನಾನ್‌ರೆಕರಿಂಗ್ ವಿಚಾರ ಇತ್ಯಾದಿಗಳ ಬಗ್ಗೆ ಒಂದು ಪ್ರಪೋಸಲ್ ಕಳುಹಿಸಿರಬೇಕು. ಆ ಸಂಬಂಧದಲ್ಲಿ ಕನಕಪುರದ ವಿಚಾರವೂ ಬಂದಿತ್ತು. ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗ ತಾವು ಹೇಳಿದ ಪ್ರಕಾರ ಆ ಕನಕಪುರದವರಂತೆ ಕೋಣನೂರಿನವರೂ ಕೂಡ ಅಲ್ಲಿ ಒಂದು ಹೈಸ್ಕೂಲನ್ನು ತೆರೆಯಲು ಕೇಂದ್ರದ ಈ ಯೋಜನೆಯಲ್ಲಿ ಸಹಾಯ ನೀಡಬೇಕೆಂದು ಅಪೇಕ್ಷೆಪಟ್ಟಿದ್ದಾರಲ್ಲವೇ?

Sri H. SIDDAVEERAPPA.—I want notice. There are various other schemes. This Rural Higher Education Scheme was not originally envisaged in the Second Five-Year plan. Therefore it is under examination.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಬಗ್ಗೆ ಬೀಳುವ ಖರ್ಚಿನಲ್ಲಿ ತಮ್ಮ ಭಾಗದ ಹಣವನ್ನು ಮುಂಗಡವಾಗಿ ಕೊಡುತ್ತೀವೆಂದು ಮುಂದೆ ಬರತಕ್ಕಂಥ ಸಾರ್ವಜನಿಕರಿಗೆ ಈ ಯೋಜನೆಯಲ್ಲಾದರೂ ಸರ್ಕಾರ ಸಹಾಯವನ್ನು ಉದಾರವಾಗಿ ನೀಡಬೇಕಾದದ್ದು ಅವಶ್ಯಕವಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಆ ಅಂಶವನ್ನು ಪರಿಶೀಲನೆ ಮಾಡೋಣ. ಈ ಸಂಬಂಧವಾಗಿ ಈ ಸಾಲಿನ ಬಜೆಟ್ಟಿನಲ್ಲಿ ಯಾವ ಹಣವೂ ಸೇರಿಲ್ಲ.

Sri G. SIVAPPA.—May I know what is Rural Higher Education Scheme?

Sri H. SIDDAVEERAPPA.—It contemplates rural institutions where provision will be made for the following courses:—

> One year's course for Diploma in Teaching, Two years' certificate course for Health workers. Two years' course for Overseers, Two years' course for Agriculture science.

Sri G. SIVAPPA.—What is the difference between the multi-purpose schools and this Rural Higher Education System?

Sri H. SIDDAVEERAPPA.—I am sorry I cannot say what exactly is the difference.

ಶ್ರೀ ಜಿ. ದುಗ್ಗಪ್ಪ.—ಈಗ ಏನಾದರೂ ಈ ಬಗ್ಗೆ ಪ್ರಪೋಸಲ್ ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಈ ಸಂಬಂಧವಾಗಿ ಮೊನ್ನೆತಾನೆ ಕೊಯಮತ್ತೂರಿನಲ್ಲಿ ಒಂದು ಕಾರ್ಖಫರೆನ್ಸ್ ಆಯಿತು. ನಮ್ಮ ಮೈಸೂರಿನಲ್ಲಿ ಎಲ್ಲೆಲ್ಲಿ ಪ್ರಾರಂಭವಾಡಬೇಕೆಂಬ ವಿಚಾರವು ಅಲ್ಲಿ ಬಂದಿತ್ತು, ಅಲ್ಲಿ ಈ ವಿಚಾರಗಳೆಲ್ಲಾ ವಿನಿಮಯವಾದವು.

ಶ್ರೀ ಜಿ. ದುಗ್ಗಪ್ಪ.—ಆಖ್ಯೆರಿನಲ್ಲಿ ಆದ ತೀರ್ಮಾನವೇನು?

ಶ್ರೀ ಎಚ್. ಸಿದ್ದವೀರಪ್ಪ.—ಆಖ್ಯೆರು ತೀರ್ಮಾನವಿನ್ನೂ ಆಗಿಲ್ಲ.

ಶ್ರೀ ಟಿ. ಸಿ. ಶಾಂತಪ್ಪ.—ಅಲ್ಲಿ ನಮ್ಮ ಚಿಕ್ಕಮಗಳೂರು ಜಿಲ್ಲೆಯ ವಿಚಾರವೇನಾದರೂ ಬಂದಿತ್ತೇ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡ.—ಈ ಬಗ್ಗೆ ಒಂದು ತೀರ್ಮಾನಕ್ಕೆ ಬರಲು ಸರ್ಕಾರಕ್ಕೆ ಇನ್ನೂ ಎಷ್ಟು ದಿವಸಗಳು ಬೇಕು?

ಶ್ರೀ ಎಚ್. ಸಿದ್ದವೀರಪ್ಪ.—ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ತಯಾರಿಸತಕ್ಕ ಕಾಲದಲ್ಲಿ ಈ ಯೋಜನೆಯು ಇನ್ನೂ ಹೊರಬಿದ್ದಿರಲಿಲ್ಲ. ಆದಷ್ಟು ಜಾಗ್ರತೆ ತೀರ್ಮಾನಕ್ಕೆ ಬರಲಾಗುತ್ತದೆ.